# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ:ಕಾ.ಪಾ.ಅ(ಗಾಂ)/ಪಿ.ಆರ್/381/12-13

ಕಾರ್ಯಪಾಲಕ ಅಭಿಯಂತರರು(ಗಾಂಧಿನಗರ)
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ,
ಬೆಂಗಳೂರು, ದಿನಾಂಕ:-21.02.2013.

## ಕಾರ್ಯದೇಶ

ವಿಷಯ:-ಗಾಂಧಿನಗರ ಉಪ-ವಿಭಾಗ ವಾರ್ಡ್ ಸಂಖ್ಯೆ- 77/ಎ ವ್ಯಾಪ್ತಿಯಲ್ಲಿ ಆಟೋಗಳ ಮೂಲಕ ಲಾರಿ ಪಾಯಿಂಟ್ ಬಳಿ ಕಸವನ್ನು ಸಾಗಿಸುವ ಬಗ್ಗೆ.

ಉಲ್ಲೇಖ:-1)ಅಪರ ಆಯುಕ್ತರು(ಪಶ್ಚಿಮ) ರವರ ಆದೇಶ ಸಂಖ್ಯೆ:-ಆಪ/ಪಿ.ಆರ್/9192/12-13, ದಿನಾಂಕ:-12.02.2013.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ನಂ-77/ಎ ವ್ಯಾಪ್ತಿಯಲ್ಲಿ ಕಸದ ವಿಲೇವಾರಿಯನ್ನು ಆಟೋ ಸಂಖ್ಯೆ KA-05-A-9940 ಮೂಲಕ ಗುತ್ತಿಗೆ ಆಧಾರದಲ್ಲಿ **ಶ್ರೀ.ಕೆ.ಲಕ್ಷ್ಮಿನಾರಾಯಣ** ರವರು ನಿರ್ವಹಿಸುತ್ತಿದ್ದು, ಸದರಿ ಗುತ್ತಿಗೆದಾರರು ಕಳೆದ ಡಿಸೆಂಬರ್-2012ರ ಮಾಹೆಯಿಂದ ಕೆಲಸಕ್ಕೆ ಪದೇ ಪದೇ ಗೈರು ಹಾಜರಾಗುತ್ತಿದ್ದು, ವಾರ್ಡಿನ ಸ್ವಚ್ಛತಾ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯುಂಟಾಗಿ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿರುವ ಕಾರಣ, ಸದರಿ ಆಟೋ ಗುತ್ತಿಗೆಯನ್ನು ರದ್ದುಪಡಿಸಿ, ಬದಲಿ ವ್ಯವಸ್ಥೆಯಾಗಿ ನಿವೃತ್ತ ಪೌರಕಾರ್ಮಿಕರಾದ ಶ್ರೀ.ಸುಬ್ಬ, ರವರ ಮಗನಾದ **ಶ್ರೀ.ಎಸ್.ರವಿ** ರವರ ಆಟೋ ಸಂಖ್ಯೆ:-KA-45-4295 ಗೆ ಗುತ್ತಿಗೆ ಆಧಾರದಲ್ಲಿ ನಿಯೋಜಿಸಿ, ದಿನಾಂಕ:-21-02-2013 ರಿಂದ ಅನ್ವಯವಾಗುವಂತೆ ಕಾರ್ಯನಿರ್ವಹಿಸಲು ಈ ಕೆಳಕಂಡ ಷರತ್ತಿನೊಂದಿಗೆ ಮುಂದಿನ ಆದೇಶದವರೆಗೆ ಲಾರಿ ಪಾಯಿಂಟ್ ಬಳಿ ಕಸ ಸಾಗಿಸಲು ಕಾರ್ಯದೇಶ ನೀಡಿದೆ.

## * ಷರತ್ತುಗಳು *

1. ಗುತ್ತಿಗೆದಾರನ್ನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಕೆಲಸದ ಸಮಯ ಬಗ್ಗೆ ಸ.ಕಾ.ನಿ.ಅ(ಗಾಂಧಿನಗರ)ಉಪ-ವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.
3. ಕೇವಲ ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು.
4. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ(ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.
5. ಸ್ವಚತಾ ಕೆಲಸಕ್ಕೆ ಆಟೋ(ಮಿನಿಡಾರ್) ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
6. ಸಾರ್ವಜನಿಕರಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.

7. ವಾಹನದ ಮುಂದೆ ವಾಹನದ ಸಂಖ್ಯೆ, ವಾರ್ಡ್ ಸಂಖ್ಯೆ ಹಾಗೂ ವಲಯದ ಹೆಸರು ಹಾಗೂ ಬಿಬಿಎಂಪಿ ಆಟೋ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.
8. ಪ್ರತಿನಿತ್ಯ ಈ ವಾರ್ಡಿನಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಸಾಗಿಸತಕ್ಕದ್ದು.
9. ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.
10. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆದಾರರನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.
11. ಕೆಲಸ ನಿರ್ವಹಿಸುವ ಪ್ರದೇಶವನ್ನು / ರಸ್ತೆಗಳ ವಿವರಗಳನ್ನು ಪರಿಸರ ಅಧಿಕಾರಿ, ಗಾಂಧಿನಗರ ಉಪ-ವಿಭಾಗ ರವರಿಂದ ಪಡೆಯತಕ್ಕದು ಹಾಗೂ ಅವರ ಆದೇಶ ಮತ್ತು ಮೇಲಾಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಿಸತಕ್ಕದ್ದು.

ಕಾರ್ಯಪಾಲಕ ಅಭಿಯಂತರರು(ಗಾಂಧಿನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕಾರ್ಯಪಾಲಕ ಅಭಿಯಂತರರು
ಗಾಂಧಿನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-20

ಗೆ,

ಗುತ್ತಿಗೆದಾರರ ವಿಳಾಸ:
ಶ್ರೀ.ಎಸ್.ರವಿ, ನಂ-76, 3ನೇ ಅಡ್ಡರಸ್ತೆ,
ಅರುಂಧತಿ ನಗರ, ಶ್ರೀರಾಂಪುರ, ಬೆಂಗಳೂರು-560021.

__ಪ್ರತಿಯನ್ನು:-__

- ಅಪರ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
- ಮುಖ್ಯ ಅಭಿಯಂತರರು(ಪಶ್ಚಿಮ)ರವರ ಅವಗಾಹನೆಗಾಗಿ ಸಲ್ಲಿಸಿದೆ.
- ಸ.ಕಾ.ನಿ.ಅ.(ಗಾಂಧಿನಗರ)ಉಪ ವಿಭಾಗ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
- ಸಹಾಯಕ ಹಣಕಾಸು ನಿಯಂತ್ರಕರು(ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಂಬಂಧಪಟ್ಟ ಗುತ್ತಿಗೆದಾರರಿಗೆ / ಕಛೇರಿ ಕಡತಕ್ಕೆ.